ಪ್ರತಿಬಿಂಬ

PRATIBIMBA–Multidisciplinary Kannada Research Journal of IIMRD
ISSN: 2582-2284
Vol-5, Special Issue-1, Sep-Oct, 2023, Pp. 60-67.
©IIMRD, Mysuru.

IIMRD JOURNALS
www.iimrd.com

# ಹರಿದಾಸರು (ಇತಿಹಾಸ/ಚರಿತ್ರೆ)

**ಕಾವ್ಯಶ್ರೀ ಕೆ.***

*ಸಂಶೋಧನಾ ವಿದ್ಯಾರ್ಥಿನಿ, ಶ್ರೀನಿವಾಸ ವಿಶ್ವವಿದ್ಯಾನಿಲಯ, ಪಾಂಡೇಶ್ವರ, ಮಂಗಳೂರು.

***ಸಾರಾಂಶ: (Abstract)***

*13–14ನೇ ಶತಮಾನದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಂತಹ ಭಾಗವತ ಪರಂಪರೆ/ಭಕ್ತಿ ಪರಂಪರೆ ಹೆಚ್ಚು ಪ್ರಖ್ಯಾತಿಯನ್ನು ಪಡೆದಿದೆ. ದಾಸರು, ಸಂತರು ಈ ಕಾಲದಲ್ಲಿ ತಮ್ಮದೇ ಆದಂತಹ ಛಾಪು ಮೂಡಿಸಿ ಕೀರ್ತನೆಗಳನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿದ್ದಾರೆ. ವಿಷ್ಣುವನ್ನು ಆರಾಧ್ಯದೈವವಾಗಿ ಸ್ವೀಕರಿಸಿ ಅವನ ಕುರಿತು ಅನೇಕ ಭಕ್ತಿಗೀತೆಗಳ ರಚನೆಯನ್ನು ಮಾಡಿರುವುದು ಇಲ್ಲಿ ಕಂಡಬರುತ್ತದೆ. ಕೈಯಲ್ಲಿ ತಾಳ ತಂಬೂರಿ ಹಿಡಿದು ಗೆಜ್ಜೆ ಕಟ್ಟಿ, ಲಜ್ಜೆ ಬಿಟ್ಟು ಹೆಜ್ಜೆ ಹಾಕಿ ಬೀದಿ ಬೀದಿಗಳಲ್ಲಿ, ಕೇರಿ ಕೇರಿಗಳಲ್ಲಿ ತಮ್ಮ ಸುಶ್ರಾವ್ಯ ಕಂಠದ ಮೂಲಕ ವೈರಾಗ್ಯ, ಭಕ್ತಿ, ಜ್ಞಾನದ ಕುರಿತಾಗಿ ಹಾಗೂ ನೀತಿಯುಕ್ತವಾದ ವಿಚಾರಗಳನ್ನು ಹೇಳುತ್ತಾ, ಆಧ್ಯಾತ್ಮದ ಅಮೃತಾನ್ನವನ್ನು ಉಣಬಡಿಸುವುದರೊಂದಿಗೆ ಸಾಮಾಜಿಕ ಜೀವನದ ಸುಧಾರಣೆಗೆ ಅಪರಿಮಿತವಾದ ಪರಿಶ್ರಮವನ್ನು ಪಟ್ಟವರು. ಈ ಹರಿದಾಸರ ಆರಂಭದಲ್ಲಿ ಶ್ರೀಪಾದರಾಜರಿಂದ ಆರಂಭವಾಗಿ ಪ್ರಸ್ತುತ ಕಾಲದಲ್ಲಿಯೂ ಹರಿಸಂಕೀರ್ತನೆ, ಹರಿಕಥೆ ನಡೆಸುತ್ತಿರುವ ಹರಿದಾಸರುಗಳನ್ನು ನಾವು ಕಾಣಬಹುದು. ಹರಿದಾಸ ಪರಂಪರೆಗೆ ಸಂಬಂಧಿಸಿದಂತೆ ಮೊದಲು ನಮನವನ್ನು ಸಲ್ಲಿಸುವ ಶ್ಲೋಕ ಹೀಗಿದೆ. "ನಮಸ್ತೇ ಶ್ರೀಪಾದರಾಜಾಯ ನಮಸ್ತೆ ವ್ಯಾಸಯೋಗಿನೇ ನಮಃ ಪುರಂದರಾರ್ಯಾಯ ವಿಜಯಾರ್ಯತೇ ನಮಃ" ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸತೀರ್ಥರು, ಪುರಂದರದಾಸರು, ಕನಕದಾಸರು, ಜಗನ್ನಾಥದಾಸರು, ವಿಜಯದಾಸರು ಹೀಗೆ ಮುಂತಾದ ದಾಸ ಪರಂಪರೆಯಲ್ಲಿನ ಪ್ರಸಿದ್ಧರನ್ನು ಕಾಣಬಹುದು.*

***ಮುಖ್ಯಪದಗಳು (Keywords)*** *ಹರಿದಾಸರು, ಆಧ್ಯಾತ್ಮ, ವೈಷ್ಣವಪಂಥ, ಪುರಂದರದಾಸರು, ಕನಕದಾಸರು.*

## ಪೀಠಿಕೆ

ಜಗತ್ತಿನಲ್ಲಿ ಡಂಭಾಚಾರಗಳು ಹೆಚ್ಚು ಅಂಧಶ್ರದ್ಧೆಗಳು ಜಾಗ್ರತಗೊಂಡು ಆಸೆ ಆಮಿಷಗಳಿಗೆ ಒಳಗಾಗಿ ತಮ್ಮಲ್ಲಿನ ಮಾನವತ್ವವನ್ನು ಮರೆತು ನಡೆಯುತ್ತಿದ್ದಂತಹ ಜನರನ್ನು ಸರಿಯಾದ ಪಥದೆಡೆಗೆ ತರಲು ಭಕ್ತಿಬೇಕು ಎಂಬ ಘೋಷಣೆಯೊಂದಿಗೆ ಅದಕ್ಕೆ ಸರಿಯಾದ ದೃಷ್ಟಾಂತಗಳನ್ನು ನೀಡಿ ಜನರಲ್ಲಿ ಜೀವನ ಶ್ರದ್ಧೆ ಮತ್ತು ಮಾನವ ಜನ್ಮದ ಶ್ರೇಷ್ಠತ್ವವನ್ನು ಸಾರಲು ಆರಂಭಗೊಂಡ ಪಂಥವೇ ಹರಿದಾಸ ಪಂಥ. ವೈಷ್ಣವಪಂಥವ ತತ್ವಗಳನ್ನು ತಮ್ಮ ಕೀರ್ತನೆಯಲ್ಲಿ ಸೇರಿಸಿ, ಅದನ್ನು ಜನಮಾನಸಕ್ಕೆ ತುಂಬುತ್ತಾ

*Please cite this article as:* ಕಾವ್ಯಶ್ರೀ ಕೆ. (2023). ಹರಿದಾಸರು (ಇತಿಹಾಸ/ಚರಿತ್ರೆ). ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.60–67.*

"ಭಕ್ತಿಯೊಂದೆ ಮುಕ್ತಿ ಸಾಧನ, ಭಕ್ತಿ ಬೇಕು ವಿರಕ್ತಿ ಬೇಕು ಎಂಬ ಹೊನ್ನುಡಿಯೊಂದಿಗೆ ಶ್ರದ್ಧಾಭಕ್ತಿ ಎಂಬ ಎರಡು ಬೆಳಕನ್ನು ಪ್ರಪಂಚದಲ್ಲಿ ಬೆಳಗಿಸಲು ಹೊರಟ ಪ್ರಮುಖ ಜ್ಞಾನಪರಂಪರೆಯ ದಿಗ್ಗರಿವರು. ಹರಿದಾಸರು ತಮ್ಮ ಉದಯವನ್ನು ಕಂಡಾಗಲೂ ಮೇಲು–ಕೀಳು, ಜಾತೀಯತೆ, ಸಾಮಾಜಿಕ ಶೋಷಣೆ, ಅಲಕ್ಷ್ಯತನ ಇವೆಲ್ಲವೂ ತಾಂಡವವಾಡುತ್ತಿದ್ದವು. ಆದರೂ ಇವೆಲ್ಲವೆನ್ನು ಅಂದೇ ಮೆಟ್ಟಿನಿಂತು ತಮ್ಮ ಸ್ವಂತಿಕೆಯೊಂದಿಗೆ ತಮ್ಮ ಚಿಂತನೆಗಳನ್ನೇ ಆಯುಧವನ್ನಾಗಿ ಮಾಡಿಕೊಂಡು ಯೋಧರಂತೆ ಹೋರಾಡುತ್ತಾ ತಮ್ಮ ಬಾಳನ್ನು ಇಂದಿಗೂ ಹಸನಾಗಿಸಿಕೊಂಡು ಸರ್ವರ ಹೃದಯದಲ್ಲಿಯೂ ಜೀವಂತಿಕೆ ಪಡೆದಿರುವ ಜಗತ್ತಿನ ದನಿಯಂತೆ ಕಂಗೊಳಿಸುತ್ತಿರುವ ಮಹನೀಯರು.

ಹರಿದಾಸರು ಹರಿಯ ಅವತಾರಗಳನ್ನು ಒಪ್ಪಿಕೊಂಡ ವಿಷ್ಣು ಪಂಥೀಯರು ರಾಮಾಯಣ, ಮಹಾಭಾರತ, ಭಾಗವತ. ಈ ಪುರಾಣಗಳ ಘನತೆ, ಗೌರವ, ಶ್ರೇಷ್ಠತೆಗಳನ್ನು ಬಲ್ಲವರಾದುದರಿಂದ ಹರಿದಾಸರು ಭಕ್ತಿಮಾರ್ಗವನ್ನು ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ. ಕರ್ನಾಟಕದ ಸಂಗೀತ ಸಾಹಿತ್ಯ ಕ್ಷೇತ್ರದಲ್ಲಿ ಹರಿದಾಸ ಪರಂಪರೆಯು ಕ್ರಿ.ಶ.14ನೆಯ ಶತಾಬ್ಧಿಯಲ್ಲಿ ಪ್ರಾರಂಭವಾಯಿತು ಎನ್ನಬಹುದು. ಹರಿದು ಹಂಚಿಹೋಗಿದ್ದ ಕನ್ನಡ ನಾಡು ಪುನಃ ಸಂಘಟಿತವಾಗಲು ತೊಡಗಿದ್ದ ಪರ್ವಕಾಲವದು. ಈ ಕಾಲದಲ್ಲಿ ಕರ್ನಾಟಕದ ಹರಿದಾಸರು ದಾಸರಾಗಿಯೇ ಇದ್ದು ಸಮಾಜ ಸಂಸ್ಕೃತಿಗಳ ನೇತಾರರಾದರು. ಕರ್ನಾಟಕದ ಹರಿದಾಸರು ನಮ್ಮ ನುಡಿಗಳಿಗೆ ಮಾಡಿದ ಉಪಕಾರವನ್ನು ಹೀಗೆ ಸಂಗ್ರಹಿಸಬಹುದು. ದೇಶಭಾಷೆಯಾದ ಕನ್ನಡವು ಸಂಸ್ಕೃತದ ಪ್ರಾಬಲ್ಯವನ್ನು ಕಡಿಮೆ ಮಾಡಿ ದೈನಂದಿನ ವ್ಯಾವಹಾರಿಕ ಭಾಷೆಯಾಗಿ ಹೊರಹೊಮ್ಮಲು ಸಾಧ್ಯವಾಯಿತು. ಸಂಗೀತದಲ್ಲಿ ಭಕ್ತಿ ಹಾಗೂ ಸ್ತುತಿಗಳು ವಿಭುಸ್ತುತಿಯ ಮೂಲಕ ಮುಕ್ತಿ ಸಾಧಕಗಳಾದವು. ಸೌಂದರ್ಯಾನ್ವೇಷಣೆಯೊಡನೆ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಮೌಲ್ಯಗಳ ಅನ್ವೇಷಣೆ, ಬೋಧನೆಗಳು ಏರ್ಪಡಲು ಹರಿದಾಸರು ಕಾರಣಕರ್ತರಾಗಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಆಕರ್ಷಕ ಪ್ರಚಾರ ಮಾಧ್ಯಮವನ್ನು ಹರಿದಾಸರುಗಳು ಏರ್ಪಡಿಸಿದರು. ವಚನಕಾರರಂತೆ ಹರಿದಾಸರು ಸಂಸ್ಕೃತವನ್ನು ಬಿಟ್ಟು ತಮ್ಮ ಅನುಭವ, ತತ್ವ, ಚಿಂತನೆ ಇವುಗಳನ್ನು ತಿಳಿಸಲು ಆಡುನುಡಿ ಕನ್ನಡವನ್ನು ಮಾಧ್ಯಮವನ್ನಾಗಿ ಬಳಸಿದರೂ ಅದು ಹೆಚ್ಚು ಜನತೆಯೊಂದಿಗೆ ಅರ್ಥಪೂರ್ಣ ಸಂಬಂಧವನ್ನು ಹೊಂದಿರುವುದು ಕಷ್ಟವಾಯಿತು. ಹರಿದಾಸರು ದೈವವಾದಿಗಳಲ್ಲಿ, ಹಣೆಯ ಬರಹದಲ್ಲಿ ಇದ್ದಂತೆ ಆಗುವುದು ಕೈಕಟ್ಟಿ ಕೂಡಬೇಕೆಂದು ಅವರು ಉಪದೇಶಿಸುವುದಿಲ್ಲ. ಹರಿದಾಸರನ್ನು ಎರಡು ಗುಂಪುಗಳನ್ನಾಗಿ ಮಾಡಿಕೊಂಡರೆ ಅದರಲ್ಲಿ; 1.ಯತಿಗಳು 2.ಗೃಹಸ್ಥರು. ಶ್ರೀನರಹರಿತೀರ್ಥರು, ಶ್ರೀಪಾದರಾಜರು, ಶ್ರೀವಾದಿರಾಜರು, ಶ್ರೀರಾಘವೇಂದ್ರರು, ಶ್ರೀವರದೇಂದ್ರರು, ಶ್ರೀ ವ್ಯಾಸತೀರ್ಥರು. ಇವರು ಯತಿಗಳಾಗಿದ್ದ ಹರಿದಾಸರು. ಇವರ ಕೃತಿಗಳು ವೇದಾಂತದ ಮುಖ್ಯ ತತ್ವಗಳ ಸಾರರೂಪವಾಗಿದೆ. ಇನ್ನು ಗೃಹಸ್ಥರಾದ ಹರಿದಾಸರಲ್ಲಿಯೂ 3 ವರ್ಗಗಳಿವೆ; 1.ವರಕವಿಗಳು, 2.ವಿದ್ವತ್ ಕವಿಗಳು, 3.ವ್ಯಾಖ್ಯಾತೃ ಕವಿಗಳು. ಪುರಂದರದಾಸರು ಮತ್ತು ಕನಕದಾಸರು ವರಕವಿಗಳು. ವಿಜಯದಾಸರು, ಗೋಪಾಲದಾಸರ ಮತ್ತು ಜಗನ್ನಾಥದಾಸರು ವಿದ್ವತ್ ಕವಿಗಳು. ನಂತರದ ಹರಿದಾಸರು ವ್ಯಾಖ್ಯಾತೃ ಕವಿಗಳು. ಯತಿಗಳು ಮತ್ತು ಪುರಂದರದಾಸರ ಯುಗ, ಮೂಲ ಯುಗ, ವಿಜಯದಾಸರ ಯುಗ, ಟೀಕಾಯುಗ, ಇನ್ನಿತರ ದಾಸರ ಯುಗ, ಟಿಪ್ಪಣಿ ಯುಗ ಎಂದು ಕರೆಯಬಹುದು.

ಸಹಜತೆ, ಸರಳತೆ, ಸರಸತೆ, ನಾದಮಾಧುರ್ಯ, ತತ್ವವಿವೇಕ, ಲೋಕಾನುಭವ ಭಕ್ತಿ ಭಾವಭರಿತವಾದ ಹರಿದಾಸರ ಕೃತಿಗಳು ಶ್ರವಣ ಮನಕಾನಂದವಾಗಿದ್ದು ಓದುಗರ ಮನಸ್ಸನ್ನು ಆಕರ್ಷಿಸಿ ಒಲಿಸಿಕೊಳ್ಳುತ್ತೇವೆ. ಹೃದಯವನ್ನು ಅಲುಗಾಡಿಸುತ್ತವೆ. ವಿಷಯ ಗಾಂಭೀರ್ಯದೊಂದಿಗೆ ಸಾಹಿತ್ಯ, ಸೌಂದರ್ಯ, ಸಂಗೀತ ಮಾಧುರ್ಯಗಳೂ ತುಂಬಿಕೊಂಡು ಹರಿದಾಸಸಾಹಿತ್ಯ ಕನ್ನಡದ–ಕನ್ನಡಿಗರ ಸಾರಸ್ವತ ಸಂಪತ್ತಾಗಿದೆ. ಹರಿದಾಸರು ಕೇವಲ ವಿರಕ್ತ–ಶುಷ್ಕ ಜೀವನವನ್ನು ಚಿತ್ರಿಸಿದ್ದಾರೆ ಎಂಬ ಸಾಮಾನ್ಯ ತಿಳುವಳಿಕೆಯಿಂದ ಹರಿದಾಸರಿಗೆ ತುಂಬಾ ಅಪಚಾರವಾಗಿದೆ ಎನ್ನಬೇಕಾಗಿದೆ. ಇಹ ಜೀವನವನ್ನು ಸರಿಯಾದ ರೀತಿಯಲ್ಲಿ ನಡೆಸಿ ಪರಲೋಕವನ್ನು ನಂಬಿ ಅಲ್ಲಿಯೂ ಸುಖ. ಹರಿದಾಸರು ತಮ್ಮ ಸಾಹಿತ್ಯದಲ್ಲಿ ತತ್ವಭಾಗ, ಕಥಾಭಾಗ ಮತ್ತು ಸಾಮಾನ್ಯ ನೀತಿ ಭಾಗಗಳನ್ನೊಳಗೊಂಡ ವಿಷಯಗಳ ವಿವೇಚನೆ ಮಾಡಿದ್ದಾರೆ. ತತ್ವಭಾಗದಲ್ಲಿ ಹರಿದಾಸರು ದ್ವೈತ ಮತಾನುಯಾಯಿಗಳು, ಕಥಾಭಾಗವು ಮಹಾಭಾರತ, ಭಾಗವತ, ರಾಮಾಯಣ ಮತ್ತು ಇನ್ನಿತರ ಪುರಾಣಗಳ ಸಾರ ಸಂಗ್ರಹರೂಪವಾದುದು. ಸಾಮಾನ್ಯ ನೀತಿಯ ಭಾಗದಲ್ಲಿ ಸತ್ಯ, ದಾನ, ಪರೋಪಕಾರ, ಭಾತೃಭಾವ, ಕಾಮ–ಕ್ರೋಧಾಧಿಗಳ ನಿಗ್ರಹ, ನೈತಿಕತೆ, ಸಜ್ಜನಿಕೆಯ ಕಷ್ಟಗಳು, ದುರ್ಜನರ ಸ್ವಭಾವದ ವಿಶ್ಲೇಷಣೆ, ಧಾರ್ಮಿಕ ಮತ್ತು ಲೌಕಿಕ ಕ್ಷೇತ್ರದಲ್ಲಿಯ ವಿಡಂಬನೆಯ ನಿಂದನೆ ಇತ್ಯಾದಿ ಮತಾತೀತವಾದ ಸಾಮಾನ್ಯನೀತಿ ಧರ್ಮದ ವಿಷಯಗಳ ಮಾರ್ಮಿಕವಾದ ವಿಶ್ಲೇಷಣೆಯಿದೆ.

ಹರಿದಾಸರು ಮಾನವನ ಮನೋದೌರ್ಬಲ್ಯವನ್ನು ಖಂಡಿಸುವ ನೈತಿಕ ಪುನರುತ್ಥಾನದ ಸಾಹಿತ್ಯವನ್ನು ರಚಿಸಿದ್ದಾರೆ. ಮೌಲ್ಯಗಳನ್ನು ಜನತೆಯ ಭಾಷೆಯಲ್ಲಿ, ಜನತೆಗಾಗಿ, ಜನತೆಯ ಜೀವನದಲ್ಲಿ ಹಾಸುಹೊಕ್ಕಾಗಿ ಬಂದ ಉಪಮಾನ, ದೃಷ್ಟಾಂತ, ಅನುಭವದ ನಿದರ್ಶನಗಳ ಮೂಲಕ ವಿವರಿಸಿರುವರು. ಆದುದರಿಂದ ಇದು ಚಿರಂತನ ಸಾಹಿತ್ಯ, ದೇವವಾಣಿಯ ಅವಳಿಯಾಗಿ ಬೆಳೆದು ಬಂದ ಜನವಾಣಿ. ಹರಿದಾಸರು ಎಂದರೆ 'ಶ್ರೀಹರಿಯ ಭಕ್ತರು' ಎಂಬುದು ಸಾಮಾನ್ಯ ಅರ್ಥ. ಈ ಅರ್ಥದಲ್ಲಿ ಹರಿಯ ಭಕ್ತರೆಲ್ಲ ಹರಿದಾಸರೇ ಆದರೂ, ಆ ಶಬ್ಧಕ್ಕೆ ವಿಶಿಷ್ಟವಾದ ಅರ್ಥವೂ ಉಂಟು. ಬಹುಶಃ ಶ್ರೀಪಾದರಾಜರಿಂದ ಆರಂಭವಾದ ಈ ಕನ್ನಡ ಹರಿದಾಸ ಪರಂಪರೆಗೆ ಸೇರಿ, ಗುರುಗಳಿಂದ ದಾಸದೀಕ್ಷೆಯನ್ನು ಅಂಕಿತೋಪದೇಶವನ್ನು ಹೊಂದಿ ಅದರ ನಿಯಮಗಳನ್ನು ನಿಷ್ಠೆಯಿಂದ ಅಂಗೀಕರಿಸಿ ಅನುಷ್ಠಾನಗೊಳಿಸಿಕೊಂಡವರು ಹರಿದಾಸರು. ನಮ್ಮ ಸಂಸ್ಕೃತಿಯ ಸಾರಭೂತವಾದ ಅಂಶ ಹರಿದಾಸರ ಅಮರವಾಣಿಯಲ್ಲಿ ಮಾರ್ನುಡಿದಿದೆ. ತಮ್ಮ ಬಾಳನ್ನು ಸಾಧನೆಯಿಂದ ಸಾರ್ಥಕಪಡಿಸಿಕೊಂಡು ಜನಮನವನ್ನು ತುಂಬಿ ಅವರ ಬಾಳನ್ನು ಹಸನಾಗಿಸುವಂತಹ ಕೃತಿಗಳನ್ನು ಹರಿದಾಸರು ರಚಿಸಿದ್ದಾರೆ. ಉದಾ:ಶ್ರೀಕೃಷ್ಣನ ವಿಯೋಗದಿಂದ ಬೃಂದಾವನ–ಗೋಕುಲದ ಗೋಪಿಯರಿಗೆ ಆದ ವಿರಹದ ವರ್ಣನೆ "ಹಾರ ಕೊರಳಿನ ಭಾರ ಸೈನಿಸಲಾರೆನೆ ಮಾರನಯ್ಯನು ಬಾರದಿದ್ದರೆ ಮಾರನಂಬಿಕೆಗೆ ಗವಿಯ ಮಾಡಿ."

ಹರಿದಾಸರು ಶಿಶುಸಾಹಿತ್ಯವನ್ನು ಚಿತ್ರಿಸಿರುವುದು ಬಹು ಸುಂದರವಾಗಿದೆ. ಉದಾ: ಅಂಗಳದೊಳು ರಾಮನಾಡಿದ ಚಂದ್ರಬೇಕೆಂದು ತಾ ಹಠ ಮಾಡಿದ. ಯಶೋದೆಯೆ ಅಮ್ಮಾ ಎನ್ನನು ಎತ್ತಿಕೊಳ್ಳಮ್ಮ. ಅನೇಕ ಅವತಾರದ ಕಥೆಗಳನ್ನು ವರ್ಣಿಸುವಾಗ ವೀರರಸದ ಪ್ರತಿಪಾದನೆಯನ್ನು ಮಾಡಿದ್ದಾರೆ. ಹರಿದಾಸರು ಭಗವಂತನನ್ನು ಪ್ರಭುವೆಂದು, ಪ್ರಿಯನೆಂದು, ವಾತ್ಸಲ್ಯಭರಿತ ಪುತ್ರನೆಂದು ಪರಿಭಾವಿಸಿ ಅಸಂಬಂಧ ಭಾವಗಳಿಗನುಗುಣವಾಗಿ ತಮ್ಮ ಹೃದಯಾನುಭವವನ್ನು ಅಭಿವ್ಯಕ್ತಗೊಳಿಸುವ, ಸಖನೆಂದು ಭಾವಿಸಿ

ಮಹಿಮೆಗಳನ್ನು ಬೇರೊಂದು ರೀತಿಯಲ್ಲಿ ನಿಂದನೆಯೋ ಎಂಬಂತೆ ಸ್ತುತಿಸಿ ಚಿತ್ರಿಸುವ ಪರಿ ಬಹು ರಮಣೀಯವಾಗಿದೆ. ಪುರಂದರದಾಸರು ಉಪನಿಷತ್‌ಗಳ ಸಾರವನ್ನು ಪುರಂದರೋಪನಿಷತ್ ಎಂದು ಕರೆಯಲ್ಪಡುವ ಸಾಹಿತ್ಯ ರಚಿಸಿದ್ದಾರೆ. ಕನಕದಾಸರು ಸಂತರಾಗಿ, ಕವಿಯಾಗಿ, ದಾಸರಾಗಿ ಅನನ್ಯತೆ ಮೆರೆದಿದ್ದಾರೆ.

ಮಧ್ವಾಚಾರ್ಯರಿಂದ ಸ್ಥಾಪಿತವಾಗಿ ಬೆಳೆದು ಬಂದ ದ್ವೈತಸಿದ್ಧಾಂತಕ್ಕೆ ಸಂಬಂಧಿಸಿದ ಸಂಸ್ಕೃತ ಗ್ರಂಥಗಳು, ಟೀಕಾಟಿಪ್ಪಣಿ ಕೃತಿಗಳ ವ್ಯಾಸಂಗದಲ್ಲಿ ನಿರತರಾಗಿ ವ್ಯಾಸಕೂಟವೆಂದು: ಅವುಗಳ ಸಾರವನ್ನು ರಸವತ್ತಾದ ಭಕ್ತಿಭರಿತವಾದ ಕನ್ನಡ ನುಡಿ ಎಂಬ ಜನವಾಣಿಯಲ್ಲ ನೀಡಿ ಆ ಪಂಗಡಕ್ಕೆ ಸೇರಿಕೊಂಡವರನ್ನು ದಾಸಕೂಟದವರೆಂದು ರೂಢಿಗೆ ಬಂದಿತು. ಹರಿದಾಸರ ರಚನೆಗಳೂ ಬಹುಮಟ್ಟಿಗೆ ತತ್ವಬೋಧಕವೂ, ಆಚಾರ–ನೀತಿ ಮತ್ತು ಮತಪ್ರಚಾರಕವೂ ಆಗಿದೆ. ಹರಿದಾಸರು ಲೋಕಾನುಭವದ ಸೂಕ್ಷ್ಮ ದೃಷ್ಟಿಯುಳ್ಳವರು, ಕವಿ ಹೃದಯವುಳ್ಳವರೂ ಆಗಿ ಶ್ರೇಷ್ಠತ್ವವನ್ನು ಪಡೆದಿದ್ದಾರೆ. ಶ್ರೀವಿಜಯದಾಸರು ಅನೇಕ ಹರಿದಾಸರಿಗೆ ಅಂಕಿತವನ್ನು ಕೊಟ್ಟರು. ಇವರಲ್ಲಿ ಗೋಪಾಲದಾಸರು, ಮೋಹನದಾಸರು, ವೇಣುಗೋಪಾಲದಾಸರು ಮತ್ತು ಹಯವದನ ವಿಠ್ಠಲನ ಪ್ರಮುಖರು. ಗೋಪಾಲದಾಸರು ಮತ್ತು ಜಗನ್ನಾಥದಾಸರಿಗೆ ನಲ್ವತ್ತು ವರುಷಗಳ ಆಯುಷ್ಯವನ್ನು ಕೊಟ್ಟು ಅನುಗ್ರಹಿಸಿದವರು. ಹರಿದಾಸ ಪರಂಪರೆಯಲ್ಲಿ ಶ್ರೀ ಪುರಂದರರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು ಮತ್ತು ಶ್ರೀಜಗನ್ನಾಥದಾಸರು ದಾಸ ಚತುಷ್ಟಯರೆಂದು ಪ್ರಸಿದ್ಧರಾಗಿದ್ದಾರೆ. ಜಗನ್ನಾಥದಾಸರ "ಹರಿಕಥಾಮೃತಸಾರ" ಕೃತಿಯ ಹರಿದಾಸವಾಙ್ಮಯರಲ್ಲಿ ವೇದಾಂತ ಪ್ರಮೇಯಗಳನ್ನು ವಿವರಿಸುವ ಕೃತಿಗಳಲ್ಲಿ ಒಂದಾಗಿದೆ. ಯೋಗ, ಧ್ಯಾನ ಮತ್ತು ಅಪರೋಕ್ಷಾನುಭವಕ್ಕೆ ಸಂಬಂಧಿಸಿದ ವಿಷಯಗಳನ್ನು ಶ್ರೀಪುರಂದರದಾಸರೂ, ಶ್ರೀವಿಜಯದಾಸರೂ, ಶ್ರೀಮಹಿಪತಿದಾಸರೂ ವಿಶೇಷವಾಗಿ ವರ್ಣಿಸುತ್ತಾರೆ. ಹರಿದಾಸರುಗಳನ್ನು ಪ್ರಮುಖವಾಗಿ ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು.

1. ಶ್ರೀಮಧ್ವಾಚಾರ್ಯರು ಮತ್ತು ಅವರ ಯತಿಶಿಷ್ಯರು.
2. ಶ್ರೀಪಾದರಾಜರು, ವ್ಯಾಸರಾಯರು. ಪುರಂದರದಾಸರೇ ಮುಂತಾದವರು (15–17ನೇ ಶತಮಾನ).
3. ಶ್ರೀವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮೋಹನದಾಸರು ಮುಂತಾದವರು (18–19ಶತಮಾನ).
4. ಶ್ರೀವಿಠ್ಠಲದಾಸರು, ಪ್ರಾಣೇಶವಿಠ್ಠಲದಾಸರು, ಐಹೊಳೆ ವೆಂಕಟದಾಸರು ಮುಂತಾದವರು (19–20ನೇ ಶತಮಾನ) ಶ್ರವಣವೇ ಮೊದಲಾದ ನವವಿಧ ಭಕ್ತಿಗಳನ್ನು ಪ್ರಚುರಪಡಿಸಿ ಹರಿದಾಸರು ಲೋಕ ಪೂಜ್ಯರಾದರು.

ಶ್ರೀಹರಿದರ್ಶನದಿಂದ ರೋಮಾಂಚಿತರಾಗಿ ವೈಷ್ಣವಬಂಧುಗಳೊಡನೆ ಶ್ರೀಹರಿಕಥಾ ಶ್ರವಣದ ಆನಂದ ಪಡೆದರು. ತಮ್ಮ ಸಮಕಾಲೀನ ಸಮಾಜವನ್ನು ಪರಿಶುದ್ಧವಾದ ಚಾರಿತ್ರ್ಯದಿಂದಲೂ ಪವಿತ್ರವಾದ ನೀತಿ ಬೋಧೆಯಿಂದಲೂ ಉಜ್ವಲಗೊಳಿಸಿದರು. ಕಥಾಶ್ರವಣಮಾಡು, ಹರಿಕಥಾ ಶ್ರವಣಮಾಡು ಎಂದು ದಾಸವರೇಣ್ಯರಿಂದ ಪುರಂದರದಾಸರು ತಿಳಿಸಿರುವುದು ಸಮರ್ಪಕವಾಗಿದೆ. ಜನಸಾಮಾನ್ಯರು ಭಕ್ತಿಯಿಂದ ಹಾಡಲು ಸಾಧ್ಯವಾಗುವಂತೆ ತತ್ತ್ವವಿಚಾರಗಳನ್ನು ಅರಿಯುವಂತೆ ಭಗವತ ಜೀವನದ ಹರ್ಷವನ್ನು ಸವಿಯುವಂತೆ ಹರಿದಾಸರು ಕನ್ನಡದಲ್ಲಿಯೇ ಪದ ಪದ್ಯಗಳನ್ನು ರಚಿಸಿದರು. ಹರಿದಾಸರು ರಚಿಸಿರುವ

ಕೃತಿಗಳಲ್ಲಿ ಕಂಡುಬರುವ ವಿಶೇಷತೆ ಎಂದರೆ ಇಲ್ಲಿಯ ನುಡಿಗೂ–ನಡೆಗೂ ಬೆಸೆದುಬಂದಿರುವ ಪರಿಶುದ್ಧವಾದ ಶೀಲಸಂಬಂಧ. ಹರಿದಾಸರು ಮಾಡಿದ ಮಹೋಪಕಾರವೆಂದರೆ ನಮ್ಮ ಹೆಂಗಸರಿಗೂ ಬದುಕನ್ನು ಕೃತಾರ್ಥಗೊಳಿಸಲು ಅನುವು ಮಾಡಿಕೊಟ್ಟರು. ಸಂಸ್ಕೃತವನ್ನು ಓದಲಾರದ ವೇದಶಾಸ್ತ್ರಗಳನ್ನು ತಿಳಿಯಲಾರದ ಸಮಾಜದ ಅರ್ಧಅಂಗ ದಾಸಸಾಹಿತ್ಯದ ಅಧ್ಯಯನದಿಂದ ಪರಿಪುಷ್ಪವಾಗಲು ಸಾಧ್ಯವಾಯಿತು. ಗಿರಿಯಮ್ಮ, ಭೀಮವ್ವನಾಥವರೂ ಸ್ವತಃ ಪದ್ಯ ರಚಿಸಿ ಹರಿದಾಸರಾಗಿ ಮುನ್ನಲೆಗೆ ಬಂದರು. ಕನ್ನಡನಾಡಿನ ಹರಿದಾಸರು ಶ್ರೀಮಧ್ವಗುರುಗಳ ಸ್ತೋತ್ರಗಳಿಂದ ಸ್ಫೂರ್ತಿಪಡೆದರು. ಹರಿದಾಸರೆಲ್ಲರೂ ಶ್ರೀಮಧ್ವಗುರುಗಳ ದ್ವೈತಸಿದ್ಧಾಂತವನ್ನೇ ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ಆನಂದತೀರ್ಥರೇ ತಮ್ಮ ಗುರುಗಳೆಂದು ನಮಸ್ಕರಿಸಿ ಅವರ ಚರಿತ್ರೆಗಳನ್ನು ಮಹಿಮೆಗಳನ್ನು ಹಾಡಿ ಹೊಗಳಿದ್ದಾರೆ. "ಸರಿತವರಿಗತಿ ಸುಲಭನೋ ಹರಿ" ಎಂದು ಹರಿದಾಸರು ನಮಗೆ ಭರವಸೆ ಎತ್ತಿರುವರು. ಹರಿದಾಸರ ಜೀವನದಲ್ಲಿ ಭಕ್ತಿಯೇ ಅವರ ಪ್ರಾಣವಾಗಿದೆ. ಸಕಲ ಇಂದ್ರಿಯಗಳನ್ನು ನಿಗ್ರಹಿಸಿ ಅವಯವಗಳನ್ನು ಶ್ರೀಹರಿಸ್ಮರಣೆ ಸೇವೆಯಲ್ಲಿ ತೊಡಗಿಸಿದಾಗ ಹರಿದಾಸರಿಗೆ ಪರಮಾನಂದವಾಗುತ್ತದೆ.

ಶ್ರೀಕೃಷ್ಣ ಚೈತನ್ಯರು ಹೇಳಿರುವಂತೆ ಹರಿದಾಸರಾದವರಿಗೆ ಅಹಂಕಾರದ ಗಾಳಿ ಕೂಡಾ ಸೋಂಕುವುದಿಲ್ಲ. ಅವರು ತಾವು ಹುಲ್ಲುಕಡ್ಡಿಗಿಂತ ಅನಿಷ್ಟ, ಮರಕ್ಕಿಂತ ಹೆಚ್ಚಿನ ಸಹನೆ ಉಳ್ಳವರು, ಇತರರನ್ನು ಮನ್ನಿಸಲು ತಾವು ಮಾನಗೆಡುವರು, ಸದಾ ಶ್ರೀಹರಿಯನ್ನು ಕೀರ್ತಿಸುವವರು ಎಂಬುದು ತಿಳಿಯುತ್ತದೆ. ಭಾರತೀಯ ಸಂಸ್ಕೃತಿಗಳನ್ನು ಸುಲಭ–ಸರಳವಾಗಿಸಿ ಜನರಿಗೆ ಅರ್ಥವಾಗುವಂತೆ ಕಥಾ ಮಾಧ್ಯಮದಿಂದ ಸಮಾಜಕ್ಕೆ ತಲುಪಿಸುವ ಓರ್ವ ಸಂದೇಶವಾಹಕರಾಗಿದ್ದರು. ಅವರ ಬಳಿ ಕಲೆ ಮತ್ತು ವಿದ್ವತ್ತು ಎರಡೂ ಸರಿಸಮಾನವಾಗಿರುತ್ತದೆ. ಹರಿದಾಸರೆಂದಾಗ ಕರ್ನಾಟಕದವರು ಮಾತ್ರವಲ್ಲದೆ ಮಹಾರಾಷ್ಟ್ರದ ಸಂತ ಶ್ರೇಷ್ಟರೂ, ನಾರದೀಯ ಕೀರ್ತನ ಪರಂಪರೆಯ ಪ್ರವರ್ತಕರಾದ ಶ್ರೀಏಕನಾಥ ಮಹಾರಾಜರನ್ನು ಗುರುತಿಸಬಹುದು. ಯುಗಪ್ರವರ್ತಕರಾದ ರಾಷ್ಟ್ರೀಯ ಸಂತ ಶ್ರೀಸಮರ್ಥ ರಾಮದಾಸರೂ ನಾಮದೇವಾದಿ ಸಂತರೂ ಕಂಡುಬರುತ್ತಾರೆ.

ಕರ್ನಾಟಕದ ಹರಿದಾಸರೆಲ್ಲರೂ ತಮ್ಮ ಕೃತಿಗಳನ್ನು ಭಾರತದ ಸಂಘಟನೆಗಳಿಂದಲೂ ನೀತಿ ವಾಕ್ಯಗಳಿಂದಲೂ, ಧರ್ಮ ಸಂದೇಶಗಳಿಂದಲೂ ವೇದಾಂತ ವಚನಗಳಿಂದಲೂ ಅಲಂಕರಿಸಿರುವರು. 'ಆಡುಮುಟ್ಟದ ಸೊಪ್ಪಿಲ್ಲ' ಎಂಬಂತೆ ಹರಿದಾಸರು ಮಹಾಭಾರತದ ಉದ್ದಕ್ಕೂ ತಮ್ಮ ದೃಷ್ಟಿಯನ್ನು ಹಾಯಿಸಿ ಅಪೂರ್ವ ಪ್ರಮೇಯಗಳನ್ನು ಹರಿದಾಸರು ವಿಶ್ವಸಾಹಿತ್ಯದ ತವನಿಧಿಯಲ್ಲಿ ಅಪರೂಪವಾದ ಸಂಪತ್ತನ್ನಾಗಿ ದಾಸಸಾಹಿತ್ಯವನ್ನು ಹಾಗೂ ತಮ್ಮ ಜೀವನವನ್ನು ಸೇರ್ಪಡೆಗೊಳಿಸಿದ್ದಾರೆ. ಪ್ರಪಂಚದ ಹಸನಾದ ಬದುಕಿಗೆ ಶಕ್ತಿಯುತವಾದ ಜೀವನಮೌಲ್ಯಗಳನ್ನು ಒದಗಿಸಿ ಮನುಷ್ಯ ಜನ್ಮವನ್ನು ಸಾರ್ಥಕ ಪಡಿಸಿದ್ದಾರೆ. ಒಣ ಡಂಭಾಚಾರ, ಮೋಜು, ಸೋಮಾರಿತನ ಇತ್ಯಾದಿ ಜಾಡ್ಯಗಳನ್ನು ನಿವಾರಣೆ ಮಾಡಿ ಸುಂದರ ಸಮಾಜದ ನಿರ್ಮಾಣ ಕಾರ್ಯದಲ್ಲಿ ಸತತವಾದ ಬೆಳಕನ್ನು ಬೀರಿದವರು ಹರಿದಾಸರು. ಹರಿದಾಸರಾಗಲಿ, ವಚನಕಾರರಾಗಲಿ ಇಬ್ಬರೂ ಭಗವದ್ಭಕ್ತರೇ. ಉನ್ನತ ಮಟ್ಟಕ್ಕೆ ಏರಿದವರು. ಮಾರ್ಗಗಳು ಭಿನ್ನವಾಗಿದ್ದರೂ ಗುರಿ ಮಾತ್ರ ಒಂದೇ ಎಂಬುದನ್ನು ಅಲ್ಲಗೆಳೆಯುವಂತಿಲ್ಲ. ಒಬ್ಬರು ಸಂಗೀತ ಪ್ರಯರಾದರೆ, ಮತ್ತೊಬ್ಬರು ವಚನಕ್ಕೆ ಒಲಿದವರು. ಇಬ್ಬರ ಉದ್ದೇಶವೂ ಒಂದೇ. ಆತ್ಮೋದ್ಧಾರ ಮತ್ತು ಭಕ್ತರಿಗೆ ಮಾರ್ಗದರ್ಶನ.

ಕನ್ನಡ ಸಾಹಿತ್ಯ ವಾಙ್ಮಯರಲ್ಲಿ ಹರಿದಾಸರ ಸುಳಾದಿ, ಉಪಭೋಗಗಳನ್ನುಳಿದ ಬಿಡಿ ರಚನೆಗಳ ಸಮೂಹಕ್ಕೆ ಕೀರ್ತನೆಗಳು ಎಂಬ ಹೆಸರಿದೆ. ಕೀರ್ತನೆ ಎಂದರೆ ಭಾಗವತದಲ್ಲಿ ಸ್ತುತಿ, ಸ್ತೋತ್ರ ಎಂಬ ಅರ್ಥಗಳಿವೆ. ಅಧಿದೈವವನ್ನು ಕುರಿತು ಹರಿದಾಸರು ಕಟ್ಟಿದ ಹಾಡುಗಳೇ ಕೀರ್ತನೆಗಳು. ಕೀರ್ತನೆಗಳಿಗೆ ಹರಿದಾಸರೇ ಮೊದಲಿಗರಿಲ್ಲ. 12ನೇ ಶತಮಾನದಲ್ಲಿ ಲಕ್ಷ್ಮಣಕ್ಕೆ ಹೊಂದಿಕೊಳ್ಳುವ ರಚನೆಗಳು ಕಂಡುಬಂದಿವೆ. ಸಮಾಜದ ಆರೋಗ್ಯ ಸೂತ್ರಗಳಿಂದ ಸತ್ಯಧರ್ಮ, ಸ್ವಚ್ಛತೆ, ಭಕ್ತಿ ಸಜ್ಜನಿಕೆಗಳನ್ನು ಬೋಧಿಸುವುದರ ಜೊತೆಗೆ ಮನುಷ್ಯನ ಮತ್ತು ಸಮಾಜದ ಸಣ್ಣತನ, ಮತ್ಸರ, ಭ್ರಮೆ, ಅಂಧಶ್ರದ್ಧೆಗಳನ್ನು ಗುರುತಿಸಿ ನಾಶಪಡಿಸಲು ಕೀರ್ತನೆಗಳ ಮೂಲಕ ಹರಿದಾಸರು ಯತ್ನಿಸಿದ್ದಾರೆ. ಹರಿದಾಸರು ತಮ್ಮ ಸಂಪೂರ್ಣ ವ್ಯಕ್ತಿತ್ವವನ್ನು ನಿಷ್ಠೆಯಿಂದ ಕೀರ್ತನೆಗಳಲ್ಲಿ ತೊಡಗಿಸಿಕೊಂಡು ಕೀರ್ತನೆಕಾರರೆಂದೇ ಪ್ರಸಿದ್ಧರಾಗಿದ್ದಾರೆ. ಕೀರ್ತನ ಸಾಹಿತ್ಯವನ್ನು ಒಂದು ಪರಂಪರೆಯಾಗಿ ಬೆಳೆಸಿದವರು ಶ್ರೀಪಾದರಾಜರು. ಹರಿದಾಸರ ಭಕ್ತಿ ಸಾಹಿತ್ಯ, ಭಕ್ತಿ ಚಳುವಳಿ ಮಧ್ವಾಚಾರ್ಯರ ನಂತರ ಭಾರತದಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡಿತು ಮತ್ತು ಮಧ್ಯಕಾಲೀನ ಭಾರತದ ಬಂಗಾಳ ಮತ್ತು ಅಸ್ಸಾಂನಂತಹ ಪೂರ್ವ ರಾಜ್ಯಗಳಿಗೆ ಹರಡಿತು. ಭಾರತದ ಸಂಸ್ಕೃತಿ, ತತ್ವಶಾಸ್ತ್ರ ಮತ್ತು ಕಲೆಯನ್ನು ರೂಪಿಸಲು ಸಹಾಯ ಮಾಡಿದರು.

ಹರಿದಾಸರು ಜನಸಾಮಾನ್ಯರ ಮನದಲ್ಲಿ ಶಾಶ್ವತವಾಗಿ ಉಳಿಯುವಂತೆ ಕನ್ನಡದಲ್ಲಿ ಸರಳವಾಗಿ ತಿಳಿಯಾಗಿ ಕೀರ್ತನೆಗಳನ್ನು, ಸುಳಾದಿಗಳನ್ನು ರಚಿಸಿ ಜಾಗೃತಿಯನ್ನು ಉಂಟು ಮಾಡಿ ಅವರನ್ನು ಸದಾಚಾರಿಗಳಾಗಿ ಜೀವನ ನಡೆಸುವಂತೆ ಮಾಡುವಲ್ಲಿ ಸಫಲವಾಗಿದ್ದಾರೆ. ಹರಿದಾಸರಿಂದ ರಚಿತಗೊಂಡಿರುವ ದಾಸಸಾಹಿತ್ಯ ಎಂದೆಂದಿಗೂ ಪ್ರಸ್ತುತವಾಗಿರುವ ಸಾಹಿತ್ಯ. ಹರಿದಾಸರು ತಮ್ಮ ರಚನೆಗಳ ಮೂಲಕ ಸಾಹಿತ್ಯದ ರಸದೌತಣ ಉಣಬಡಿಸಿದರು. ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಹರಿದಾಸರ ಪಾತ್ರ ಬಹಳ ದೊಡ್ಡದು, ಶಬ್ಧವು ಶ್ರುತಿಗೊಂಡು ನಾದವಾಗುವಂತೆ ಅಭಿವ್ಯಕ್ತಿಯ ಲಕ್ಷಣವಾಗಿದೆ. ಶ್ರೀವಾದಿರಾಜರು ತಮ್ಮ ಕೀರ್ತನೆಯಲ್ಲಿ ಕುಲಮದ, ವೈಭವಮದ, ವಿದ್ಯಾಮದಗಳನುಳಿದು ಹರಿದಾಸರ ಮೊರೆಹೊಕ್ಕು ಸುಖಿಯಾಗು ಎಂದು ಹರಿದಾಸರ ಬಗ್ಗೆ ಅವರಲ್ಲಿದ್ದ ಮೌಲ್ಯಗಳ ಬಗ್ಗೆ ನುಡಿದಿದ್ದಾರೆ. ಭಕ್ತಿ, ವಿರಕ್ತಿ, ಅನುರಕ್ತಿಗಳ ಸಂಗಮವೇ ಹರಿದಾಸ ಪರಂಪರೆ. ಸುಮಾರು 150 ಹರಿದಾಸರು ಕರ್ನಾಟಕದಲ್ಲಿ ತಮ್ಮ ಸಾಹಿತ್ಯದ ಸುಧೆಯನ್ನು ಹರಿಸಿದ್ದಾರೆ. ಹರಿದಾಸರ ಬೋಧನೆಗೆ ವೇದಾಂತವೇ ಆಧಾರ. ಕರ್ನಾಟಕದ ಹರಿದಾಸರು ಪವಿತ್ರ ಸತ್ಯಗಳನ್ನು ಸರಳವಾಗಿ ಅರ್ಥೈಸಿದ್ದಾರೆ. ಮೋಕ್ಷ, ಕರ್ಮ, ಜ್ಞಾನ, ಯೋಗ ಮತ್ತು ಭಕ್ತಿಯ ನಾಲ್ಕು ಮಾರ್ಗಗಳಲ್ಲಿ ಹೆಚ್ಚಿನ ಹರಿದಾಸರು ಕೊನೆಯದನ್ನು ಗುರುತಿಸಿದ್ದಾರೆ. ಅವರ ಎಲ್ಲಾ ಭಾವೋದ್ರೇಕತೆಯಲ್ಲೂ ಶ್ರೀಹರಿಯ ಹೃದಯದ ಬಗೆಗಿನ ಅಶಾಂತಿ, ಹಸಿವು, ಭಕ್ತಿ ಅಂತಿಮವಾಗಿದೆ. ದಾಸಸಾಹಿತ್ಯದ ಮೂಲಕ ಹರಿದಾಸರು ಜೀವಂತಿಕೆಯನ್ನು ಹೊಂದಿದ್ದಾರೆ. ಮೌಲ್ಯಗಳ ಮೂಲಕ ದಾಸಸಾಹಿತ್ಯ ಇಂದಿಗೂ ಜೀವಂತವಾಗಿದೆ

"ಅಳಿಯುವುದು ದೇಹ, ಉಳಿಯುವುದು ಕೀರ್ತಿ" ಎಂಬಂತೆ ಹರಿದಾಸರು ಇಂದಿಗೂ ಜನಮಾನಸದಲ್ಲಿ ನೆಲೆಗೊಂಡಿದ್ದಾರೆ. ಒಂದು ರಾಷ್ಟ್ರದ ಒಂದು ಜನಾಂಗದ ಸಿದ್ದಿಸಾಧನೆಗಳು, ಅದರ ಸಂಸ್ಕೃತಿಯ ಎತ್ತರ–ಬಿತ್ತರಗಳು ಅರಿವಾಗುವುದೇ ಆ ರಾಷ್ಟ್ರದ, ಜನಾಂಗದ ಸಾಹಿತ್ಯದಿಂದ. ಸಂಸ್ಕತ ಸಾಹಿತ್ಯದ ಉಪನಿಷತ್ತು, ಗೀತೆಯಂತಹ ಬರಹಗಳ ಮೂಲಕ ಪ್ರಾಚೀನ ಕಾಲದಲ್ಲೆ ಭಾರತ ಉನ್ನತ

ಸಂಸ್ಕೃತಿಯ ಉತ್ತುಂಗ ಶೃಂಗಕ್ಕೆ ಕೈಚಾಚಿತ್ತು. ಭಗವದ್ಗೀತೆಯ ಪರಿಕಲ್ಪನೆ, ಭಾಷೆ, ಶೈಲಿ, ಸಂವಹನ, ಪರಿಣಾಮ ಇವೆಲ್ಲಾ ಆ ಕಾಲಕ್ಕೆ ಭಾರತ ಪಡೆದಿದ್ದ ಆಧ್ಯಾತ್ಮಕ ಸಿದ್ಧಿಯ ಹೆಗ್ಗುರುತುಗಳು. ಭಗವದ್ಗೀತೆಯನ್ನು ದರ್ಶನ ಗ್ರಂಥಗಳ ರಾಜ ಎನ್ನುತ್ತಾರೆ. ಮನುಷ್ಯ ಮತ್ತು ಅವನ ಸೃಷ್ಟಿಕರ್ತನೊಡನೆ ನಡೆದ ನೇರ ಸಂವಾದ ಮೊಟ್ಟ ಮೊದಲ ಅಧಿಕೃತ ಬೃಹತ್ ಹಾಗೂ ಮಹತ್ವದ ದಾಖಲೆಯೇ ಭಗವದ್ಗೀತೆ. ಅಂತಹ ಗೀತೆಯ ವಾಕ್ಯವನ್ನು ಹರಿದಾಸರು ಹಾಡುಗಳ ಮೂಲಕ ಸಮರ್ಥವಾಗಿ ಅರ್ಥೈಸುವ ಪರಿ, ಶೈಲಿ, ಅನನ್ಯತೆಯಿಂದ ಕೂಡಿರುವಂತದ್ದು. ಭಾರತ ತನ್ನದೇ ಆದ ವಿಶಿಷ್ಟ ಸಂಸ್ಕೃತಿ, ಕಲೆ, ಧರ್ಮವನ್ನು ಹೊಂದಿದ್ದು ಅದು ವಿಶ್ವದಲ್ಲೆ ಖ್ಯಾತಿ ಗಳಿಸಿದೆ. ವೇದಗಳ ಕಾಲದಿಂದ ಇಂದಿನವರೆಗೂ ಸಂಸ್ಕೃತಿ ಹಾಗೂ ಜೀವನಧರ್ಮ ಶಾಶ್ವತವಾಗಿ ಮುಂದುವರೆಯಲು ಅನೇಕ ಋಷಿಗಳು, ಆಚಾರ್ಯರು, ಸಂತರು ಶ್ರಮಿಸಿರುವಂತೆ ಜನಜೀವನಕ್ಕೆ ಉತ್ತಮ ಮಾರ್ಗದರ್ಶನವನ್ನು ನೀಡುವಲ್ಲಿ ಹರಿದಾಸರ ಪಾತ್ರ ಮಹತ್ವವಾದುದು.

ಹರಿದಾಸರಿಗಿದ್ದ ಸಂಗೀತ ಜ್ಞಾನ ಅತಿಶಯವಾದುದು ವಿವಿಧ ರಾಗ–ತಾಳಗಳಲ್ಲಿ ಸಂದರ್ಭಕ್ಕೆ ತಕ್ಕ ಸಾಹಿತ್ಯದಿಂದ ಒಡಗೂಡಿದ ರಚನೆಗಳನ್ನು ವಿದ್ವಾಂಸರು ಇಂದಿಗೂ ಹಾಡುವುದು ಸಾಮಾನ್ಯ. ಹರಿದಾಸರಿಗೆ ಹರಿಯೇ ಸರ್ವಸ್ವ ಹರಿಭಕ್ತಿಯೇ ಮುಕ್ತಿ ಮಾರ್ಗ, ಈ ಹಾದಿಯಲ್ಲಿ ವಿವಿಧ ಹರಿದಾಸರು ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಸರ್ವಸ್ವವನ್ನು ತ್ಯಜಿಸಿ ತಮ್ಮನ್ನು ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಂಡು ಜನರಿಗೆ ಸರಿಯಾದ ಮಾರ್ಗದಲ್ಲಿ ಜೀವನ ನಡೆಸಲು ಹೇಳಿದ ಹರಿದಾಸರು ತಾವು ನೆಲೆಸಿದ್ದ ಪ್ರದೇಶದ ಜನಸಾಮಾನ್ಯರ ಆಡುಭಾಷೆಗಳಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿ ಹಾಡಿದ್ದಾರೆ. ಹರಿದಾಸರು ಕೇವಲ ದಾಸರಾಗಿಯೇ ಉಳಿಯದೇ ಕವಿಗಳಾಗಿಯೂ ಸಾಹಿತ್ಯ ಕ್ಷೇತ್ರಕ್ಕೆ ಅತ್ಯಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ತಲೆಗೆ ರುಮಾಲನ್ನು ಸುತ್ತಿ, ಕೊರಳಲ್ಲಿ ತುಳಸಿಮಾಲೆಯನ್ನು ಧರಿಸಿ, ಕೈಗಳಲ್ಲಿ ತಾಳ, ತಂಬೂರಿಗಳನ್ನು ಹಿಡಿದು ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು ಕಾಲಿಗೆ ಗೆಜ್ಜೆಯನ್ನು ಕಟ್ಟಿ ಹರಿನಾಮ ಸಂಕೀರ್ತನೆಗಳನ್ನು ಮಾಡುತ್ತಾ ದೇಶ–ದೇಶಗಳನ್ನು ತಿರುಗಿದ ಹರಿದಾಸರುಗಳು ದ್ವೈತಮತಧರ್ಮವನ್ನು ಸಾಮಾನ್ಯ ಜನರಲ್ಲಿ ಸುಲಭವಾಗಿ ಪ್ರಚಾರ ಮಾಡಿದರು. ನಮ್ಮ ದೇಶದ ಸಂಪ್ರದಾಯ ಪರಂಪರೆಗಳನ್ನು ಅನುಸರಿಸಿ, ತಮ್ಮ ಆರಾಧ್ಯ ದೇವರನ್ನು ಆರಾಧಿಸುತ್ತಾ, ಭಜಿಸುತ್ತಾ ಧ್ಯಾನಿಸುತ್ತಾ ಬದುಕಿದ ಶ್ರೇಷ್ಠ ಕವಿ, ಸಂತರು, ಹರಿದಾಸರು ತಮ್ಮ ವಿಷಯದ ಬಗ್ಗೆ ಬರೆದುಕೊಂಡಿರುವುದು ಬಹಳ ವಿರಳವಾಗಿದೆ.

ಹಿಂದೂ ಧರ್ಮದ ಮಹಿಮೆಯನ್ನು ಸುಲಭವಾದ ರಸಬದ್ಧವಾದ ಕೀರ್ತನೆಗಳಿಂದ ಹಾಡಿ ಹೊಗಳಿ ಪ್ರಚಾರ ಮಾಡಿದವರಲ್ಲಿ ಸಂತ ತುಳಸಿದಾಸರು, ಸೂರದಾಸರು, ಕಬೀರದಾಸರು, ಚೈತನ್ಯ ಮಹಾಪ್ರಭುಗಳು, ಸಂತ ತುಕಾರಾಮ್, ಮೀರಬಾಯಿ ಮೊದಲಾದ ಹರಿದಾಸರುಗಳನ್ನು ಕಾಣಬಹುದಾಗಿದೆ. ಭಾರತೀಯ ಸಂಸ್ಕೃತಿಯ ಹರಿದಾಸ ಪರಂಪರೆಯಲ್ಲಿ ಪುರುಷರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಸ್ತ್ರೀಯರ ಸಂಖ್ಯೆ ಅತಿ ವಿರಳ. ಸಾಮಾನ್ಯವಾಗಿ ಸ್ತ್ರೀಯರು ತಮ್ಮ ಎಲ್ಲಾ ವಯಸ್ಸಿನಲ್ಲೂ ಮನೆಯ ವಾತಾವರಣದ ಒತ್ತಡಕ್ಕೆ ನಿರ್ಬಂಧವಾಗುವುದು ಸಾಮಾನ್ಯ. ಇದು ಸಣ್ಣ ವಯಸ್ಸಿನಲ್ಲಿ ತಂದೆ–ತಾಯಿಯರ ಬೆಳವಣಿಗೆಯಲ್ಲಿನ ಒತ್ತಡ ಮದುವೆಯಾದ ನಂತರ ಹೊಸ ವಾತಾವರಣದಲ್ಲಿ ಗಂಡ, ಅತ್ತೆ, ಮಾವಂದಿರ ಪ್ರಭಾವ, ಮುಂದುವರೆಯುತ್ತಾ ಮಕ್ಕಳ ಜವಾಬ್ದಾರಿ ಇವೆಲ್ಲವೂ ಒಬ್ಬ ಸ್ತ್ರೀಯ ಬೆಳವಣಿಗೆಗೆ ಅತ್ಯವಶ್ಯಕವೂ, ಅನಿವಾರ್ಯವೂ ಆಗಿರುತ್ತದೆ. ಆದರೆ ಇವೆಲ್ಲವನ್ನು ಮೀರಿ ಆಧ್ಯಾತ್ಮಿಕವಾಗಿ ಮುಂದುವರೆದು ತಮ್ಮನ್ನು

ಭಗವಂತನ ಸಾಕ್ಷಾತ್ಕಾರದಲ್ಲಿ ತೊಡಗಿಸಿಕೊಂಡು ತಮ್ಮ ಜೀವನ ನಡೆಸುತ್ತಾ ಹರಿದಾಸರಂತಹ ಉನ್ನತ ಪದವಿಗೆ ಏರುವವರು ಅತಿ ವಿರಳ. ಅಂತಹ ಮಹನೀಯರಲ್ಲಿ ಮೀರಾಬಾಯಿ, ಆಂಡಾಳ್, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಸರ್ವಶ್ರೇಷ್ಠರಾದ ಮಹಿಳಾ ಹರಿದಾಸರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ. ಆರ್. ಸಿ. (2014). ಮಹಾಕವಿ ಪಂಪೆಯ ಹರಿಹರ ದೇವಕೃತ ಪುರಾತನರ ರಗಳೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮೈಸೂರು.
- ರಂ.ಶ್ರೀ ಮುಗಳಿ. (2016). ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.